ಕಷ್ಟ ನೋಡಲಾರದೆ ಒಂದು ಮನೆ ಕಟ್ಟಿಕೊಡ್ತಾನಂದ್ರೆ ಇವರಿಗ್ಯಾಕೆ ಅದರ ಉಸಾಬರಿ? ಅವನನ್ನೂ ದೂರ ಮಾಡ್ಕೊಂಡು ಹೇಗೆ ಬದುಕೋದು ಹೇಳು?" ಎಂದು ಹೇಳಿ ಕಣ್ಣನ್ನು ಒರೆಸತೊಡಗಿದಳು. ನೀಲಿಗೆ ಏನೇನೂ ಅರ್ಥವಾಗದೇ, "ಅತ್ತೆ, ಗೋವಿಂದ ಅದೇನೋ ಫೇರ್ ಆ್ಯಂಡ್ ಲವ್ಲಿ ಅಂತ ತಂದುಕೊಟ್ಟಿದ್ನಲ್ಲ. ಅದನ್ನ ಹಚ್ತಾ ಇದ್ದೀಯಾ? ನಿನ್ನ ಮುಖದ ಕಲೆ ಎಲ್ಲ ಹೋಯ್ತಾ?'' ಎನ್ನುತ್ತಾ ಅತ್ತೆಯ ಮುಂಗುರುಳ ಅಡಿಯಲ್ಲಿರುವ ಕಲೆಗಳ ಬಗ್ಗೆ ಕೇಳತೊಡಗಿದಳು. ಅತ್ತೆ ಏನೋ ಉತ್ಸಾಹ ಪಡೆದುಕೊಂಡವಳಂತೆ, "ಹಾಂ, ನೋಡಿಲ್ಲಿ ಕಲೆ ಹೋಗ್ತಾ ಇದೆ. ನೀನು ಹೋಗೋವಾಗ ಸ್ವಲ್ಪ ಹಚ್ಚಿಕೊಂಡು ಹೋಗು. ಘಮ್ಮಂತ ಪರಿಮಳ ಬರುತ್ತೆ. ಮತ್ತೆ ಅಪ್ಪಂಗೆ ಹೇಳ್ಬಿಡಬೇಡ ಅತ್ತೆಗೆ ಅವ ತಂದುಕೊಟ್ಟದ್ದು ಅಂತ. ನಿನ್ನಪ್ಪ ಇನ್ನೊಬ್ಬ ದೂರ್ವಾಸ ಮುನಿ. ಮತ್ತೆ ಒಂದು ರಾಮಾಯಣ ಗ್ಯಾರಂಟಿ'' ಎಂದವಳೇ ನಗತೊಡಗಿದಳು. ಇವತ್ತೇನೋ ಏನು ಮಾತಾಡಿದರೂ ರಾಮಾಯಣದಲ್ಲಿಯೇ ಕೊನೆಗೊಳ್ಳುವುದಲ್ಲ ಎಂದು ನೀಲಿ ತಲೆಬಗ್ಗಿಸಿ ಉಣ್ಣತೊಡಗಿದಳು. ಸರುಅತ್ತೆ ಇಬ್ಬರೂ ಉಂಡ ಬಾಳೆಯನ್ನು ಎಸೆಯಲು ಹೊರಗೆ ಹೋದಾಗ ನೀಲಿ ಚಾವಡಿಯಲ್ಲಿ ಬಂದು ನಿಂತಳು.

ಆಚೆ ಬಾಗಿಲಿನಿಂದ ಹುಶ್... ಎಂಬ ಶಬ್ದ ಕೇಳಿಬಂದು ಆ ಕಡೆ ತಿರುಗಿದರೆ ಕಿಟ್ಟಣ್ಣ ಸನ್ನೆ ಮಾಡಿ ಕರೆಯುತ್ತಿದ್ದ. ಅವನ ಬೆನ್ನಿಗೀಗ ಕಪ್ಪೆ ಎಣ್ಣೆ ಮೆತ್ತಿಕೊಂಡಿತ್ತು. ಅವನೊಂದಿಗೆ ಒಳಕೋಣೆಗೆ ಹೋದಾಗ ದೊಡ್ಡಮ್ಮ ಊಟ ಮಾಡುತ್ತಿದ್ದಳು. "ನೀಲಿ, ನೀನು ಅವಳ ಮನೆಗೆಲ್ಲ ಹೋಗಬೇಡ. ಅವಳು ಹಾದರಗಿತ್ತಿ. ಇವರ ಜಾಗದಲ್ಲೇನಾದರೂ ಇವತ್ತು ನಿನ್ನ ಅಪ್ಪ ಇರಬೇಕಿತ್ತು. ಅವಳನ್ನ ಕಪ್ಪೊಂದು ತುಂಡೆರಡು ಮಾಡಿಬಿಡ್ತಿದ್ದರು. ಆ ಗೋವಿಂದ ಕೆಲಸಕ್ಕೆ ಬಂದ್ರೆ ಯಾರು ಬೇಡ ಅಂತಾರೆ? ಅವನ ಉಂಡ ಎಂಜಲನ್ನೂ ಇವಳೇ ತೆಗೀತಾಳೆ ಬಿನ್ನಾಣಗಿತ್ತಿ! ಮದುವೆಯಾಗಿ ನಾಲ್ಕು ಮಕ್ಕಳಿರೋ ಮುದಿಪ್ರಾಣಿ ಅದು. ಇದಕ್ಕಾದರೂ ಬುದ್ಧಿ ಬೇಡವಾ? ಹೇಳೋಕೋದರೆ ನಾವು ಹಾಳು. ಮಗಾ, ನೀನು ನಾಳೇನೂ ಅವಳೆದುರು ಅದೇ ಪಾಠ ಓದು. ಅದೇನು ಮಾಡ್ತಾಳೋ ನಾನೂ ನೋಡ್ತೇನೆ'' ಎನ್ನುತ್ತಾ ಊಟ ಮುಗಿಸಿ ಎದ್ದಳು. ಇವಳು ಕಿಟ್ಟಣ್ಣನ ಪ್ರತಿಕ್ರಿಯೆಗಾಗಿ ಅವನ ಮುಖ ನೋಡಿದಳು. ಕಿಟ್ಟಣ್ಣ ಹತ್ತಿರ ಬಂದು ಗುಟ್ಟಾಗಿ ಇವಳಲ್ಲಿ ಹೇಳಿದ, "ನೀನಿವತ್ತು ಇಲ್ಲೇ ಇರು. ಸಂಜೆ ಸೋಗೆ ಅಟ್ಟಣಿಗೆಯಡಿಗೆ ಹಾವು ಏಣಿ ಆಟ ತೋರಿಸ್ತೇನೆ'' ನೀಲಿ ಅಲ್ಲಿಂದ ಓಡುತ್ತಾ ಹೇಳಿದಳು, "ಏ... ಹೋಗೊ ನಂಗೆ ಹಾವುಗಳಂದ್ರೆ ತುಂಬಾ ಭಯ''.

ನೀಲಿಗೆ ನಿಜವಾಗಿಯೂ ಭಯವಾಗಿತ್ತು. ಅಪರೂಪಕ್ಕೆ ಮನೆಯ ತೋಟದಲ್ಲಿ ಹಾವು ಏಣಿಯಾಟವಾಡುವ ಹಾವುಗಳನ್ನು ತೋರಿಸಲು ಅಪ್ಪ ತನ್ನನ್ನು ಕರೆದರೆ, ಅಮ್ಮ ಅದನ್ನು ಮಕ್ಕಳೆಲ್ಲ ನೋಡಬಾರದೆಂದು ಹೆದರಿಸುತ್ತಿದ್ದುದು ನೆನಪಾಯಿತು. ಹಾಲಿನ ಹನುಮಿ ಬೇಗ ಬರಲಿ ದೇವರೆ... ಎನ್ನುತ್ತಾ ಚಾವಡಿಯ ಬಾಗಿಲಿಗೊರಗಿ ನಿಂದು ಕಾಯತೊಡಗಿದಳು.


### ಸುಧಾ ಆಡುಕಳ

ಮೂಲತಃ ಹೊನ್ನಾವರ ತಾಲೂಕಿನ ಆಡುಕಳದವರು. ಪ್ರಸ್ತುತ ಉಡುಪಿಯ ಬಾಲಕಿಯರ ಸ. ಪ. ಪೂ. ಕಾಲೇಜಿನಲ್ಲಿ ಗಣಿತ ಉಪನ್ಯಾಸಕರು. 'ರಾಧಾ', 'ಮಕ್ಕಳ ರವೀಂದ್ರ', 'ಚಿತ್ರಾ', 'ನೃತ್ಯಗಾಥಾ' ಮೊದಲಾದ ನಾಟಕಗಳನ್ನು ರಚಿಸಿದ್ದಾರೆ. 'ಬಕುಲದ ಬಾಗಿಲಿನಿಂದ' ಎಂಬ ಸ್ತ್ರೀಕೇಂದ್ರಿತ ಅಂಕಣ ಬರಹಗಳ ಪುಸ್ತಕ ಪ್ರಕಟವಾಗಿದೆ.